Doc-506
T-P-2

Reg No B G 155 5—7—72

55th Year of Publication ★ 'Satyavadi' daily, Mysore 4

In the State - The First
Golden Jubilee
Celebrated Paper
★
News, Views, Dharmic
Moral_Ethical Matters



ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸಂರವೇಶಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಮೈಸೂರು ರಾಜದಲ್ಲಿ ಅಧಿಕಾರಿಗಳ ಸಂಬಳ 1 ಸಾವಿರ ಇರಬೇಕು

ಲ ಶಿ ಗ

ಪ್ರಜ್ಞಾಶೂನ್ಯತೆ

ಭೂಪಾಲಿನಿಂದ ಬಂದಿರುವ ವರದಿ ಪ್ರಕಾರ ಸಾರೋಡ್ ಉಸ್ತಾದ್ ಅಲ್ಲವುದ್ದೀನ್ ಖಾನರು ಮಲ್ಲಾರಿನ ತಮ್ಮ ಮನೆಯಲ್ಲಿ ಪ್ರಜ್ಞಾಶೂನ್ಯರಾಗಿ ಬಿದ್ದಿರುವರು. ಅವರನ್ನು ನೋಡಿದ ಮುಖ್ಯ ಮಂತ್ರಿ ಶ್ರೀ ಸೇಥಿಯವರು ಅವರನ್ನು ನೋಡಿಕೊಳ್ಳಲು ನರ್ಸ್‌ಗಳು ಇಬ್ಬರಿಗೆ ಆಜ್ಞೆ ಮಾಡಿರುವರು

★

ಪರ್ಯಾಲೋಚನೆ

ಮೈಸೂರು ರಾಜ್ಯದ ಎಲ್ಲ ನಗರ ಭಾಗಗಳಲ್ಲಿ ಬಾಡಿಗೆದಾರರನ್ನು ಮಾಲೀಕರು ಓಡಿಸದಂತೆ ರಕ್ಷಣೆ ಮತ್ತು ನ್ಯಾಯಾಂಗ ಅಧಿಕಾರಿಗಳೂ ಸೇರಿ ಸರ್ವ ಸರ್ಕಾರಿ–ಅಧಿಕಾರಿಗಳ ವೇತನ ಒಂದು ಸಾವಿರ ರೂ. ಮಿತಿಯಿರಬೇಕೆಂಬ ಸಲಹೆಯನ್ನು ಶಾಸನ ಸಭೆಯ ಕಾಂಗ್ರೆಸ್ ಪಾರ್ಟಿ ಚರ್ಚಿಸಲಿರುವದಾಗಿ ಬೆಂಗಳೂರು ವಾರ್ತೆ.

★

ಮಾರಕ್ಸಿಸ್ಟರ ದೈವ ಭಕ್ತಿ

ಮಧುರೈ— ಮಾರಕ್ಸಿಸ್ಟು ಕಮ್ಯೂನಿಸ್ಟು ಪಾರ್ಟಿಯ 9 ನೇ ಸಮ್ಮೇಳನದ ಕಡೆಯ ದಿನವಾದ ಭಾನುವಾರ ಬಂದಿದ್ದ ಪ್ರತಿನಿಧಿಗಳ ಭಾರಿ ಗುಂಪು ವಿಮಾನಾಶ್ರೈದೇವಸ್ಥಾನಕ್ಕೆ ಭೇಟಿಕೊಟ್ಟು ದೇವರ ಮುಂದೆ ಕೈಮುಗಿದು ನಿಂತಿದ್ದರು.

★

ಅವಿಶ್ವಾಸ

ಕೊಲಂಬೊ— ಬಹುಮಂದಿ ನಿರುಪಾದಿತ ತಮಿಳು ಯುವಕರನ್ನು ವಿಚಾರಣೆಗೆ ಒಳಪಡಿಸದೆ, ಜೈಲಿನಲ್ಲಿ ಹಾಕಿರುವುದನ್ನು ಖಂಡಿಸಿ ಲಂಕಾ ಪಾರ್ಲಿಮೆಂಟಿನ 13 ಜನ ತಮಿಳು ಸಂಯುಕ್ತರಂಗದವರು ಸರಕಾರದ ಮೇಲೆ ಅವಿಶ್ವಾಸ ಸೂಚನೆ ತರಲು ನಿರ್ಧರಿಸಿರುವರು.

ದಿವ್ಯವಾಣಿ

ತೆರಿಗೆಗಳಿಂದಲೆ ಜನತೆಯು ಸರಕಾರದ ಲಾಭಕ್ಕೆ ಕೊಡುವ ಧನವಲ್ಲ ; ಜನಕ್ಷೇಮಾಭಿವೃದ್ಧಿಗೆ ಕೊಡುವ ವಂತಿಗೆ ಅದು.

— ಕೌಟಿಲ್ಯ

ಕನ್ನಡಿಗರ ಹಿತಕ್ಕಾಗಿ

ಬೆಂಗಳೂರು— ಮಂಗಳೂರು ಫರ್ಟಿಲೈಜರ್ ಫ್ಯಾಕ್ಟರಿಯ ಮತ್ತು ವಿಜಯನಗರದ ಉಕ್ಕು ಯಂತ್ರಾಗಾರದಲ್ಲಿ ಕನ್ನಡಿಗರಿಗೆ ಶೇಕಡ 75 ರಷ್ಟು ಕೆಲಸ ಡೊರೆಯಬೇಕೆಂದು ವಿಧಾನ ಪರಿಷತ್ತಿನಲ್ಲಿ ಕೇಳಿಕೆ ಹಾಕಲಾಯಿತು.

●

ಮೈಸೂರು ಒಲಂಪಿಕ್

ಬೆಂಗಳೂರು— ರಾಜ್ಯದ 13 ನೇ ಒಲಂಪಿಕ್ ಕ್ರೀಡೆಗಳು ಆಗಸ್ಟ್ 11 ರಿಂದ 12 ರವರೆಗೆ ಕಂಠೀರವ ಸ್ಟೇಡಿಯಂನಲ್ಲಿ ಇದೆ

★

ಬಂಗ್ಲಾ ದೇಶಕ್ಕೆ ಮನ್ನಣೆ

ಸಿಮ್ಲಾ— ಪಾಕಿಸ್ತಾನವು ಬಂಗ್ಲಾ ದೇಶಕ್ಕೆ ಆಗಸ್ಟ್‌ನಲ್ಲಿ ಮನ್ನಣೆ ಕೊಡುವ ಸಂಭವನೀಯತೆಯಿರುವದೆಂದು ಪಾಕಿಸ್ತಾನಿ ವಕ್ತಾರರೊಬ್ಬರು ಹೇಳಿದರು.

●

ಖಾದಿಧಾರಿಗಳು

ವಾರ್ಧಾ— ಅಖಿಲ ಭಾರತ ಖಾದಿ ಮತ್ತು ಗ್ರಾಮೋದಯ ಕೈಗಾರಿಕೆ ಸಮಿತಿಯ ಅಧ್ಯಕ್ಷ ಶ್ರೀ ರಾಮಚಂದ್ರನ್ ಅವರು ಖಾದಿ ಕಾರ್ಯಕರ್ತರು 1 ಲಕ್ಷ ಖಾದಿ ಉಪಯೋಗಿಸುವ ಸಂಸಾರಗಳನ್ನು ಸೇರಿಸಲು ಕರೆಯಿತ್ತಿರುವರು.

ಹೆಂಡತಿ ಗೆದ್ದಳು

ವಾಷಿಂಗ್ಟನ್— ಮಾಜಿ ಅಟರ್ನಿ ಜನರಲ್ ಜಾನ್ ಮಿಚಲ್ಲರು ಅಧ್ಯಕ್ಷ ನಿಕ್ಸನ್ನರ ಪುನರ್ ಚುನಾವಣಾ ಡೈರೆಕ್ಟರಾದುದಕ್ಕೆ ಅನುಮತಿಗೊಂಡ ಅವರ ಪತ್ನಿಯು ಅವರು ರಾಜಕೀಯದಿಂದ ನಿವೃತ್ತಿಗೊಳ್ಳದಿದ್ದರೆ, ಅವರನ್ನು ತ್ಯಜಿಸುವದಾಗಿ ಬೆದರಿಕೆ ಹಾಕಿದರು ! ಅವರು ನಿವೃತ್ತಿಗೊಂಡರು !

○

ಪಶುಸಂಗೋಪನೆ

ಬೆಂಗಳೂರು— ಪಶುಸಂಗೋಪನೆ ಇಲಾಖೆಯವರು 71.72 ಸಲ್ಲಿ ರೂ 2500 ಬೆಲೆಯ 5 ಗೂಳಿಗಳನ್ನು ರಾಯಚೂರು ಜಿಲ್ಲೆಯಲ್ಲಿ ಹಂಚಿದರು — ಸಿಂಧೂರಿನಲ್ಲಿ ಒಂದು ಸಂಚಾರಿ ಪಶುವೈದ್ಯಶಾಲೆ ಸ್ಥಾಪಿಸಿರುವರು — ಗಂಗವತಿಯಲ್ಲಿ ಕೋಳಿ ಕ್ಷೇತ್ರದಲ್ಲಿ ರೂ. 35000 ಖರ್ಚಿನಲ್ಲಿ 1000 ಪಕ್ಷಿಗಳ ಸುರಕ್ಷಿತ ಸ್ಥಾನ ಸ್ಥಾಪಿಸಿರುವರು.

○

ಆಯುರ್ವೇಧ

ಬೆಂಗಳೂರು— ಆಯುರ್ವೇದವನ್ನು ಆಲೋಪತಿಯ ಸರಿಸಮಾನ ಸ್ಥಾನದಲ್ಲಿಡಲು ಸರ್ಕಾರ ನಿರ್ಧರಿಸಿರುವದೆಂದು ಆರೋಗ್ಯ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಈ ಸಂಬಂಧದ ಸಮ್ಮೇಳನದಲ್ಲಿ ತಿಳಿಸಿದರು

★

★ ಮಂಗಳವಾರ ನವದೆಹಲಿಗೆ ಬಂದ ಅಮೇರಿಕಾ ಅಧ್ಯಕ್ಷ ನಿಕ್ಸನರ ವಿಶೇಷ ರಾಯಭಾರಿಗೆ ಸುಸ್ವಾಗತ ದೊರೆಯಿತು ವಿದೇಶಾಂಗ ಮಂತ್ರಿ ಶ್ರೀ ಸ್ವರಣ ಸಿಂಗ್‌ರೊಡನೆ 90 ನಿಮಿಷಗಳ ಹೊತ್ತು ಮಾತುಕತೆ ನಡೆಸಿದರು.

ಕಂಪ್ಯೂಟರಿಂದಾದ ಪ್ರಮಾದ

ಗುಡಿಬಂಡೆ— ಕಂಪ್ಯೂಟರ್ ತಪ್ಪಿನಿಂದ ಈಚೆಗೆ ನಡೆದ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶ್ರೀನಿವಾಸ ಮತ್ತು ಮಹಬೂಬ್ ಸುಭಾನ್ ಎನ್ನುವವರು ನಾಪಾಸಾದರು — ಈ ಬಗ್ಗೆ ಸಂಶಯಗೊಂಡ ಅವರು ಪರೀಕ್ಷಾ ಮಂಡಲಿಗೆ ಮನವಿ ಮಾಡಿದರು – ಅವರು ಪುನರ್ವಿಮರ್ಷಿಸಿ ಇವರನ್ನು ಪಾಸ್ ಮಾಡಿಸಿದರು

★

ಭಾರತೀಯನಿಗೆ ಪ್ರಶಸ್ತಿ

ನವದೆಹಲಿ– ಅಮೇರಿಕಾದ ತೈಲ ರಸಾಯನಜ್ಞರ ಸಂಸ್ಥೆಯ ಪ್ರಸ್ತುತ ವರ್ಷದ ವಿದ್ಯಾರ್ಥಿ ಪ್ರಶಸ್ತಿಯನ್ನು ಕುಲ್ಬಿರ್ ಸಭರ್ವಾಲ ಎಂಬ ವಿದ್ಯಾರ್ಥಿಗಳಿಸಿದ್ದಾನೆ.

★

ಅಕ್ರಮ ಸಾರಾಯಿ ವಶ

ಹುಬ್ಬಳ್ಳಿಯಿಂದ ಬಂದಿರುವ ಪರಿಷಿಯಂತೆ, ಪೆಟ್ರೋಲ್ ಟ್ಯಾಂಕರಿನಲ್ಲಿ ಅಕ್ರಮವಾಗಿ ಗೋವಾದಿಂದ ಸಾಗಿಸಲಾಗುತ್ತಿದ್ದ 60 ಸಾವಿರ ರೂ ಬೆಲೆ ಬಾಳುವ ಸಾರಾಯಿಯನ್ನು ಗೋಕುಲ ರಸ್ತೆಯಲ್ಲಿ ಪೋಲೀಸರು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿದರು

★

ಜನಸಂಘದ ಚಳವಳಿ

ನವದೆಹಲಿಯಿಂದ ಬಂದಿರುವ ಪರಿಷಿಯಂತೆ, ಸಿಮ್ಲಾ ಒಡಂಬಡಿಕೆ ವಿರುದ್ಧ ರಾಷ್ಟ್ರ ಮಟ್ಟದಲ್ಲಿ ಜನಸಂಘ ಚಳುವಳಿ ಹೂಡಲಿದೆ ಈ ತಿಂಗಳು 16 ಮತ್ತು 17 ರಂದು ಸೇರುವ ಪಾರ್ಟಿಯ ಕಾರ್ಯಕಾರಿ ಸಮಿತಿ ಚಳುವಳಿ ಸ್ವರೂಪ ಪರಿಶೀಲಿಸುವುದು. ಈ ತಿಂಗಳು 31 ನೇ ತಾ. ಪಾರ್ಲಿಮೆಂಟ್ ಮುಂದೆ ಸಾಮೂಹಿಕ ಪ್ರದರ್ಶನ ನಡೆಸುವುದು.

ಕೊಳಚೆ ಪ್ರದೇಶಗಳಿರುವುದಿಲ್ಲ

ಬೆಂಗಳೂರು— ನಗರದಲ್ಲಿ ಇನ್ನು ಕೊಳಚೆ ಪ್ರಹೇಶಗಳು ಉದ್ಭವಿಸಲು ಅವಕಾಶ ಕೊಡುವುದಿಲ್ಲವೆಂದು ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸ್ ರವರು ವಿಧಾನ ಪರಿಷತ್ತಿನಲ್ಲಿ ತಿಳಿಸಿದರು.

ರೈತರ ಚಳುವಳಿ

ಮದರಾಸು —ರೈತರ ಚಳುವಳಿ ಅಂಗವಾಗಿ ಇಂದು ರಾಜ್ಯಾದ್ಯಂತ ಕರೆಯಲಾಗಿರುವ ಬಂದ್ ಸಂದರ್ಭದಲ್ಲಿ ಡಿ ಎಂ ಕೆ ಸರಕಾರದ ಮುನ್ನೆಚ್ಚರಿಕೆ ಕಾರ್ಯದಲ್ಲಿ ನಿನ್ನೆ 3200 ಮಂದಿಯನ್ನು ಬಂಧಿಸಲಾಗಿದೆ.

ಬೆಳಗಾಂ ವಿಭಜನೆ ಕೂಡದು

ಬೊಂಬಾಯಿ— ಬೆಳಗಾಂ ತಾಲ್ಲು ಮಹಾರಾಷ್ಟ್ರ ಏಕೀಕರಣ ಸಮಿತಿಯ ನಿರ್ಧಾರದಂತೆ ಬೆಳಗಾಂ ತಾಲ್ಲೂಕಿನ ವಿವಿಧ ಸಂಸ್ಥೆಗಳ ಚುನಾಯಿತ ಸದಸ್ಯರು 140 ಮಂದಿ, ಏನೇಆದರೂ ಬೆಳಗಾಂ ವಿಭಜನೆಗೆ ಮಹಾರಾಷ್ಟ್ರ ಸರಕಾರ ಒಪ್ಪಬಾರದೆಂಬುದನ್ನು ಒತ್ತಾಯ ಮಾಡಲು, ಶಾಸನಸಭೆ ಮುಂದೆ 3 ದಿನದಗಳ ಧರಣವನ್ನು ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಪ್ರಾರಂಭಿಸಿದರು.

ವಿಚಾರಣೆ ತಪ್ಪಿದ್ದಲ್ಲ

ಕೊಮಿಲಾ– ಯುದ್ಧ ತಕ್ಸೀರುದಾರರನ್ನು ಬಂಗ್ಲಾದೇಶದ ಭೂಮಿಯ ಮೇಲೆ ವಿಚಾರಣೆಗೊಳಪಡಿಸಲಾಗುವುದೆಂದು ಬಂಗ್ಲಾದೇಶದ ಪ್ರಧಾನಿ ಮುಜಿಬರ್ ಇನ್ನೊಮ್ಮೆ ಸ್ಪಷ್ಟಪಡಿಸಿದರು – ತಕ್ಸೀರುದಾರರು ಶಿಕ್ಷಿಸಲ್ಪಡಲೇಬೇಕೆಂದು ಹೇಳಿದರು.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೀಷ್ಠನೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಕವರ ಚೊಚ್ಚಲು ಚಿತ್ರ

ಆ ನೆ – ಹು ಡು ಗ

S H A K T I

S U D H A

A Superb Tenic

Quality Printing Neat Binding

Lakshminarasimha Press

Sivarampet, Mysore

ವುಡ್‌ಲ್ಯಾಂಡ್ 30-6-72ರಿಂದ ಅಮೋಘ 9 ನೇ ವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಸಂಡಲಿಖಾಲಿ
ನಿರ್ದೇಶನ: ರಾಶಿ ಸಹೋದರರು ನಿರ್ಮಾಪಕರು: ಎಂ ಜೆ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಮೊಹಲಕಾತ್ರಿ

ಅಪೂರ್ವ 30 6 72 ರಿಂದ

ಜೆಮಿನಿಸಿಟ್ಟುವರ ಮಹೋನ್ನತ ತೆಲುಗು ವರ್ಣ ಚಿತ್ರ

ಕಲೆಕ್ಟರ್ ಜಾನಕಿ

ಪಾತ್ರ — ಜಮುನ, ಜಯಂತಿ, ರಮಾಪ್ರಭ, ನಿರ್ಮಲ, ಚಂದ್ರಿಕ, ಜಗ್ಗಯ್ಯ

ದಿನ 3 ಪ್ರದರ್ಶನಗಳು

Contribute Liberally
to the National Defence Fund



Help The Gorakshana

— Humanitarian Propoganda Monthly ....

Protect the Cow

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4